**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಖಾನಾಪೂರ.**

**ಸಿ.ಸಿ ನಂ:** 382/2022

ಪಿ.ಡಬ್ಲ್ಯೂ - 3

ಸಿ.ಡಬ್ಲ್ಯೂ - 7

| | | |
|---|---|---|
| ಹೆಸರು | : | ಜಯರಾಮ ಹೆಗಡೆ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಅಬಕಾರಿ ಉಪ ನಿರೀಕ್ಷಕರು, ಸವದತ್ತಿ ವಲಯ, |
| ವಾಸ | : | ಸವದತ್ತಿ |

ದಿನಾಂಕ 12.08.2025. ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಸಸಅ ರವರಿಂದ**

ನಾನು ಖಾನಾಪೂರದ ಅಬಕಾರಿ ಉಪ ನಿರೀಕ್ಷಕ ಎಂದು ಫೇಬ್ರುವರಿ 2021 ರಿಂದ ಜೂನ 2023 ರವರೆಗೆ ಕಾರ್ಯ ನಿರ್ವಹಿಸಿದ್ದೇನೆ.

ದಿಃ 03.03.2021 ರಂದು ಚಾಸಾ 1 ರವರು ಈ ಪ್ರಕರಣದ ಕಡತವನ್ನು ತನಿಖೆಗಾಗಿ ಹಸ್ತಾಂತರಿಸಿದರು. ದಿಃ 04.03.2021 ರಂದು ಚಾಸಾ 4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡೆನು. ದಿಃ 08.04.2021 ರಂದು ಆರೋಪಿತನು ನನ್ನ ಮುಂದೆ ಜಾಮೀನು ಪಡೆದುಕೊಂಡು ಹಾಜರಾದನು. ನಂತರ ತನ್ನ ಸ್ವ ಇಚ್ಛೆ ಹೇಳಿಕೆಯನ್ನು ನೀಡಿದನು. ಸದರಿ ದಿನ ಚಾಸಾ 4 ಮತ್ತು 5 ರವರು ಆರೋಪಿತನನ್ನು ಗುರುತಿಸಿರುತ್ತಾರೆ. ದಿಃ 07.05.2021 ರಂದು ಮುದ್ದೆ ಮಾಲನ್ನು ರಾಸಾಯನಿಕ ಪರೀಕ್ಷೆಗಾಗಿ ಚಾಸಾ 5 ರವರ ಮುಖಾಂತರ ಕಳುಹಿಸಿಕೊಟ್ಟೆನು. ದಿಃ27.05.2021 ರಂದು ನಿಪಿ-5 ರಂತೆ ರಾಸಾಯನಿಕ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡೆ. ದಿಃ

18.06.2021 ರಂದು RTO., Medchal Hydrabad Telangana ಇವರಿಗೆ ಈ ಪ್ರಕರಣದಲ್ಲಿ ಭಾಗಿಯಾದ ವಾಹನಗಳ ಬಿ ಎಕ್ಸಟ್ರ್ಯಾಕ್ಟನ್ನು ಕೋರಿ ಒಂದು ವಿನಂತಿ ಪತ್ರವನ್ನು ಕಳುಹಿಸಿದೆನು. ಸದರಿ ಪತ್ರವನ್ನು ನಿಪಿ -6 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ದಿಃ 23.07.2021 ರಂದು ಪತ್ರದ ಮೂಲಕ ನನಗೆ ಸದರಿ ವಾಹನದ ಬಿ ಎಕ್ಸಟ್ರ್ಯಾಕ್ಟ ಬಂದಿರುತ್ತದೆ. ಸದರಿ ದಾಖಲೆಯನ್ನು ನಿಪಿ-7 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ದಿಃ 26.07.2021 ರಂದು ಚಾಸಾ 6 ರವರಿಗೆ ನೋಟಿಸ ನೀಡಿರುತ್ತೇನೆ. ಸದರಿ ನೋಟಿಸನ್ನು ನಿಪಿ-8 ಎಂದು , ಸಾಕ್ಷಿದಾರರ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ದಿಃ30.07.2021 ರಂದು ಚಾಸಾ 6 ರವರ ಸ್ವ ಇಚ್ಛೆಯನ್ನು ನೀಡಿರುತ್ತಾರೆ. 1ನೇ ಆರೋಪಿಗೆ ಸದರಿ ವಾಹನಮ್ನ ಮಾರಾಟ ಮಾಡಿರುವುದಾಗಿ ಹೇಳಿರುತ್ತಾರೆ. ಆರೋಪಿತನ ವಿರುದ್ಧ ಸೂಕ್ತ ಸಾಕ್ಷ್ಯಾ ಧಾರಗಳು ಇದ್ದ ಕಾರಣ ಮಾನ್ಯ ನ್ಯಾ ಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ. ನಾನು ಆರೋಪಿತನನ್ನು ಗುರುತಿಸಬಲ್ಲೆ. ಸಾಕ್ಷಿದಾರರು ಮುದ್ದೆ ಮಾಲನ್ನು ಗುರುತಿಸಿರುತ್ತಾರೆ.

**ವಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್ ಎಂ ಎಚ್ ವಕೀಲರಿಂದಃ**

ಚಾಸಾ 2 ಮತ್ತು 3 ನಮ್ಮ ಇಲಾಖೆಯ ಸಿಬ್ಬಂದಿಗಳು ಎಂದು ಸೂಚಿಸಿದರೆ ಸರಿ . ನಾವು ಸ್ಥಳಿಯ ಪಂಚರಿಗೆ ಹುಡುಕಿದಾಗ ಅವರು ಸಿಗಲಿಲ್ಲ. ನಾವು ಸ್ಥಳಿಯ ಪಂಚರಿಗೆ ಹುಡುಕಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ಈ ಪ್ರಕರಣದಲ್ಲಿ ಯಾವುದೇ ಶೋಧನಾ ಸಮುಚಿತ ವಾರಂಟ ಇರುವುದಿಲ್ಲ ಎಂದು ಸೂಚಿಸಿದರೆ ಸರಿ . ದಾಳಿಗೆ ಪೂರ್ವದಲ್ಲಿ ಯಾವುದೇ ತರ ಸರ್ಚ ವಾರಂಟ ಪಡೆದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ತನಿಖೆ ಮಾಡದೇ, ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿ, ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದು ಸೂಚಿಸಿದರೆ ಸರಿಯಲ್ಲ. ಪ್ರಕರಣದ ಆರೋಪಿಗೂ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲವೆಂದು ಸೂಚಿಸಿದರೆ ಸರಿಯಲ್ಲ .

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.

**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಖಾನಾಪೂರ.**

**ಸಿ.ಸಿ ನಂ:**

ಪಿ.ಡಬ್ಲ್ಯೂ - 2

ಸಿ.ಡಬ್ಲ್ಯೂ - 4

ಹೆಸರು : ಮಲಿಕಜಾನ್ ಮನ್ಸೂರ ನಂದಗಡಿ

ವಯಸ್ಸು : 27 ವರ್ಷ

ಉದ್ಯೋಗ : ಕೂಲಿ

ವಾಸ : ಪಾರಿಶ್ವಾಡ , ತಾಃ ಖಾನಾಪೂರ

ದಿನಾಂಕ 05-08-2025 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸಸಅ ರವರಿಂದ

ಚಾಸಾ 01 ನನಗೆ ಪರಿಚಯ . ಚಾಸಾ 02, 03, 05 ನನಗೆ ಪರಿಚಯ ಇರುವುದಿಲ್ಲ , ಆರೋಪಿತರ ಪರಿಚಯ ಇರುವುದಿಲ್ಲ . ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ . ನನಗೆ ನನ್ನ ಮುಂದೆ ಪಂಚನಾಮೆಯನ್ನು ಮಾಡಿರುವುದಿಲ್ಲ . ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ . ಯಾವುದೇ ವಸ್ತುಗಳನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ .

ನಾನು ನವೆಂಬರ 2019 ರಿಂದ ಜನವರಿ 18 2020ರವರೆಗೆ ಪಿಎಸಆಯ ಅಗಿ ನಂದಗಡ ಠಾಣೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದೆ.

ನನಗೆ ಆರೋಪಿತರ ಪರಿಚಯವಿದೆ . ಜ ಚಾಸಾ-4 ನನ್ನ ತಮ್ಮ. ಚಾಸಾ-5 ನನ್ನ ತಂದೆ. ಚಾಸಾ -6 ತಾಯಿ. ಚಾಸಾ7 ಮತ್ತು 8 ನನಗೆ ಪರಿಚಯ.

ದಿನಾಂಕ 29.04.2022 ರಂದು ನನ್ನ ತಂದೆ ತಾಯಿಯವರು ನನ್ನ ಗಂಡ ಆಗುವವನ ಮನೆಯನ್ನು ನೋಡಲು ವರ್ಕಡ ಗ್ರಾಮಕ್ಕೆ ಹೊಗಿದ್ದರು. ಸಂಜೆ 09.00 ಗಂಟೆ ಸುಮಾರಿಗೆ ನನ್ನ ತಂದೆ ತಾಯಿಯವರು ಮನೆಗೆ ಬಂದರು. ಆಗ ಆರೋಪಿಯು ನಮ್ಮ ಮನೆಯ ಮೇಲೆ ಕಲ್ಲನ್ನು ಒಗೆದು ಓಡಿ ಹೋದನು. ಇದರ ಬಗ್ಗೆ ನನ್ನ ತಂದೆ ಊರ ಹಿರಿಯರಿಗೆ ಫೋನನಲ್ಲಿ ತಿಳಿಸಿದರು. ಪಂಚರು ನಾಳೆ ಬೆಳಿಗ್ಗೆ ಇದರ ಬಗ್ಗೆ ವಿಚಾರ ಮಾಡೋಣ ಎಂದು ಹೇಳಿದರು. ನಂತರ ನಮ್ಮ ತಂದೆ ಪೊಲೀಸರಿಗೆ ಫೋನ ಮಾಡಿ ವಿಷಯ ತಿಳಿಸಿದರು. ನಂತರ ಮರುದಿನ ಪೊಲೀಸರು ಆರೋಪಿತನ ಮನೆಗೆ ಹೋಗಿ ಕೇಳಿದಾಗ ಆರೋಪಿತನು ನಾನು ಈ ಕೃತ್ಯ ಮಾಡಿಲ್ಲ ಎಂದು ಅವರ ಮುಂದೆ ಸಮಜಾಯಿಸಿ ನೀಡಿದ್ದನು. ನಂತರ ನಾವು ಪೊಲೀಸ ಠಾಣೆಗೆ ದಿನಾಂಕ 01.05.2022ರಂದು ಈ ವಿಷಯ ಬರವಣಿಗೆ ಮೂಲಕ ನೀಡಿದೆವು. ಸಾಕ್ಷಿದಾರರು ತನ್ನ ಅರ್ಜಿಯನ್ನು ನೋಡಿ ಗುರುತಿಸಿದ್ದು ಸದರಿ ಅರ್ಜಿಯನ್ನು ನಿಪಿ-1 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ಮರುದಿನ ಪೊಲೀಸರು ಅಪರಾಧ ನಡೆದ ಸ್ಥಳದ ಪಂಚನಾಮೆ ಮಾಡಿಕೊಂಡು ಹೋಗಿರುತ್ತಾರೆ. ಸಾಕ್ಷಿದಾರಳು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದರಿಂದ ಪಂಚನಾಮೆಯನ್ನು ನಿಪಿ-2 ಎಂದು ಸಾಕ್ಷಿದಾರಳ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ಫೊಟೋವನ್ನು ತೆಗೆದಿರುತ್ತಾರೆ. ಸಾಕ್ಷಿದಾರಳು ಫೊಟೋವನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-3

ಎಂದು ಗುರುತಿಸಲಾಯಿತು. ಈ ಘಟನೆ ಆದ ನಂತರ ಆರೋಪಿಯು ನನಗೆ ಜೀವ ಬೆದರಿಕೆಯನ್ನು ಹಾಕಿರುತ್ತಾನೆ.

(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)

ಪಾಟೀ ಸವಾಲುಃ ಸಸಅ ರವರಿಂದ

ಆರೋಪಿಯು ನನಗೆ ಅವಾಚ್ಯ ಶಬ್ದಗಳಿಂದ ಬೈದನೆಂದರೆ ಸರಿಯಲ್ಲ. ನಾನು ನಿಪಿ-4 ರಂತೆ ಮರು ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ಎಡಿಎಲ್ ವಕೀಲರಿಂದ

ನಾನು 12ನೇ ತರಗತಿವರೆಗೆ ಮರಾಠಿ ಮಾಧ್ಯಮದಲ್ಲಿ ಶಾಲೆ ಕಲಿತಿರುತ್ತೇನೆ. ನಾನು ಹಾಗೂ ಆರೋಪಿತರು ಒಂದೇ ಸಮುದಾಯಕ್ಕೆ ಸೇರಿದವರು ಎಂದರೆ ಸರಿ . ಈ ಪ್ರಕರಣಕ್ಕೆ ಮೊದಲು ನಾನು ಆರೊಪಿತನ ವಿರುದ್ಧ ಇನ್ನೊಂದು ಪ್ರಕರಣ ದಾಖಲಿಸಿದ್ದೆ ಎಂದರೆ ಸರಿ . ಆರೋಪಿಯು ನಮ್ಮ ಮನೆಯ ಹಂಚುಗಳಿಗೆ ಕಲ್ಲು ಒಗೆದಿದ್ದರಿಂದ ನಮ್ಮ ಮನೆಯ ಹಂಚುಗಳು ಒಡೆದಿರುತ್ತವೆ. ಸದರಿ ಒಡೆದ ಹಂಚುಗಳನ್ನು ಹಾಗೂ ಆರೋಪಿ ಎಸೆದ ಕಲ್ಲುಗಳನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ. ನಾನು ದೂರು ನೀಡಿದ ನಂತರ ಪೊಲೀಸರಿಗೂ ನನಗೂ ಸಂಪರ್ಕವಾಗಿಲ್ಲ. ಈ ಘಟನೆಯು ರಾತ್ರಿ 08.00 ರಿಂದ 09.00 ರವರೆಗೆ ನಡೆದಿರುತ್ತದೆ. ಆರೋಪಿಯ ವಿರುದ್ಧ ನಾನು ಈಗಾಗಲೇ ಒಂದು ಕೇಸನ್ನು ದಾಖಲಿಸಿದ್ದು ಸದರಿ ಪ್ರಕರಣದಲ್ಲಿ ಜಾಮಿನು ರದ್ದು ಗೊಳಿಸುವ ಸಲುವಾಗಿ ಈ

ಪ್ರಕರಣವನ್ನು ಸಲ್ಲಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಆರೋಪಿಯು ನಮ್ಮ ಮನೆಗೆ ಕಲ್ಲು ಎಸೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆರೋಪಿತನು ಯಾವುದೇ ತಪ್ಪು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ನಿಪಿ-3 ರಲ್ಲಿ ಕಾಣುವ ಮನೆಯ ಮೇಲೆ ನಮ್ಮ ಮನೆ ಎಂದು ತೋರಿಸುವ ಯಾವುದೇ ಗುರುತು ಚಿನ್ಹೆ ಇರುವುದಿಲ್ಲ ಎಂದರೆ ನಿಜ. ಸದರಿ ಭಾವ ಚಿತ್ರದಲ್ಲಿ ಹಂಚು ಒಡೆದಿರುವ ಬಗ್ಗೆ ಯಾವುದೇ ಕುರು ಇಲ್ಲ ಎಂದರೆ ಸರಿ .

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.